# ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ
# ದಾಂಡೇಲಿ

**ಸಿ.ಸಿಃ 424/2025**

**ಫಿರ್ಯಾದುದಾರರು** : ಸುಭಾಶ ರಾಮು ಬೋವಿ
ವಯಸ್ಸುಃ 45 ವರ್ಷ,
ಉದ್ಯೋಗಃ ಮೇಸ್ತ್ರಿ ಕೆಲಸ,
ವಾಸಃ ಬಾಂಬೆ ಚಾಲ್, ದಾಂಡೇಲಿ.

---ವಿರುದ್ಧ---

**ಆರೋಪಿ** : ತಬಸ್ಸುಮ್ ಗೌಸ್ ಖಾನ್
ವಯಸ್ಸುಃ 41, ಉದ್ಯೋಗಃ ಮನೆ ಕೆಲಸ,
ವಾಸಃ ಸೆಂಟ್‌ಮೈಕೆಲ್ಸ್ ಕಾನ್ವೆಂಟ್ ಶಾಲೆ,
ದಾಂಡೇಲಿ ಪಟ್ಟಣ, ದಾಂಡೇಲಿ.

ಆ ರೋಪಿಯಾದ ನಿಮ್ಮ ವಿರುದ್ದ ಈ ಕೆಳಗಿನಂತೆ ನಾನು ಹೊರಿಸಿರುವಃ.

**ಆ ಪಾ ದ ನೆ**

ಏನೆಂದರೆ ಆರೋಪಿಯಾದ ನೀವು ಫಿರ್ಯಾದಿಗೆ ಪರಸ್ಪರ ಪರಿಚಯಸ್ಥರಾಗಿದ್ದು, ಆರೋಪಿಯಾದ ನೀವು ನಿಮ್ಮ ಪ್ರಾಪಂಚಿಕೆ ಮತ್ತು ಕೌಟುಂಬಿಕ ಅಡಚಣೆ ಸಲುವಾಗಿ ಫಿರ್ಯಾದಿಯಿಂದ ರೂ.2,00,000/- ರೂಪಾಯಿಗಳನ್ನು ಕೈಗಡ ಅಂತ ಸಾಲ ಪಡೆದುಕೊಂಡಿದ್ದು, ನಂತರ ಫಿರ್ಯಾದಿಯು ಕೆಳವು ದಿನಗಳು ಬಿಟ್ಟು ನಿಮಗೆ ಸದರಿ ಹಣವನ್ನು ಮರಳಿ ಕೊಡಲು ಕೇಳಿದಾಗ, ನೀವು ದಿನಾಂಕ 04.03.2025 ರಂದು ಸ್ಟೇಟ್ ಬ್ಯಾಂಕ ಆಫ್ ಇಂಡಿಯಾ, ಲೆನಿನ್ ರಸ್ತೆ, ದಾಂಡೇಲಿ ಶಾಖೆಯ ನಿಮ್ಮ ಖಾತೆ ನಂ. 42828709832 ನೇದ್ದಕ್ಕೆ ಸಂಬಂಧಿಸಿದ ಚೆಕ್ ನಂ. 574644 ಚೆಕ್ಕನ್ನು

ರೂ.2,00,000/- ಹಣದ ಪಾವತಿಗಾಗಿ ಫಿರ್ಯಾದಿಗೆ ನೀಡಿದ್ದು, ಸದರಿ ಚೆಕ್ಕನ್ನು ಫಿರ್ಯಾದಿದಾರರು ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ್, ದಾಂಡೇಲಿ ಶಾಖೆಯಲ್ಲಿ ಸಲ್ಲಿಸಿದಾಗ ಸದರಿ ಬ್ಯಾಂಕಿನವರು ಸದರಿ ಚೆಕ್ಕನ್ನು ಪರಿಶೀಲಿಸಿ ದಿನಾಂಕ 06.03.2025 ರಂದು "Insufficient Fund" ಎಂಬ ಹಿಂಬರಹದೊಂದಿಗೆ ಉತ್ತರಿಸಿರುತ್ತಾರೆ. ನಂತರ ಫಿರ್ಯಾದಿದಾರರು ತಮ್ಮ ವಕೀಲರ ಮೂಲಕ ದಿನಾಂಕಃ 21-03-2025 ರಂದು ನೋಂದಾಯಿತ ಅಂಚೆ ಮೂಲಕ ನೋಟೀಸನ್ನು ಜಾರಿ ಮಾಡಿದ್ದರೂ ಸಹ ನೀವು ಚೆಕ್ಕಿನ ಹಣ ಪಾವತಿ ಮಾಡದೇ ಉದ್ದೇಶಪೂರ್ವಕವಾಗಿ ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲವೆಂಬ ವಿಚಾರವನ್ನು ತಿಳಿದಿದ್ದು ಚೆಕ್ಕನ್ನು ನೀಡಿ ನೆಗೋಶಿಯಬಲ್ ಇನ್ಸ್‌ಟ್ರುಮೆಂಟ್ ಕಾಯ್ದೆ ಕಲಂ 138 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧ ಮಾಡಿರುತ್ತೀರಿ ಎಂದು ಆಪಾದಿಸಲಾಗಿದೆ.

**ಆರೋಪಿಯ ಹೇಳಿಕೆ**

1. ಪ್ರಶ್ನೆಃ ಈಗ ಓದಿ ಹೇಳಿದ ಆಪಾದನೆ ನಿಮಗೆ ತಿಳಿಯಿತೇ?

ಉತ್ತರಃ

2 .ಪ್ರಶ್ನೆಃ ಈ ಆರೋಪಣೆಯ ಬಗ್ಗೆ ನೀವು ನಿಮ್ಮ ತಪ್ಪು ಒಪ್ಪಿ ಕೊಳ್ಳುತ್ತೀರೋ ಅಥವಾ ವಿಚಾರಣೆಯಾಗಬೇಕೇ?

ಉತ್ತರಃ

(ಈ ಆರೋಪಣೆಯನ್ನು ದಿನಾಂಕಃ 17.10.2025 ರಂದು ಆರೋಪಿಗೆ ತಿಳಿದ ಭಾಷೆಯಲ್ಲಿ ಓದಿ ಹೇಳಿ, ವಿವರಿಸಿ, ಅವರಿಂದ ಉತ್ತರ ಪಡೆದು ದಾಖಲಿಸಿದ್ದೇನೆ.)

**(ತೇಜಸ್ವಿನಿ ಸೊಗಲದ)**
**ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,**
**ದಾಂಡೇಲಿ**